



# ಮೊಸಳೆಯೊಂದಿಗೆ ಸರಸ!

ಇದು ಮೊಸಳೆ ಪಾರ್ಕ್! ಆಸ್ಟ್ರೇಲಿಯಾದ ಡಾರ್ವಿನ್ ಸಿಟಿಯಲ್ಲಿರುವ ಕ್ರೊಕೊಸಾರಸ್ ಕೊವ್ ಎಂಬ ವಿಶಿಷ್ಟ ಥೀಮ್ ಪಾರ್ಕ್. ಈ ಹಿಂದೆ ನೀವು ಶಾರ್ಕ್ ಡೈವ್, ಡಾಲ್ಫಿನ್ ಡೈವ್‌ಗಳನ್ನು ನೋಡಿದ್ದರೆ, ಇದು ಅದಕ್ಕಿಂತ ತುಸು ವಿಭಿನ್ನ ಅನುಭವ ನೀಡುವ ಪಾರ್ಕ್.

ಮೈಕೆಲ್ ಸ್ಕಾಟ್ ಎಂಬಾತ 2008ರಲ್ಲಿ ಆರಂಭಿಸಿದ ಈ ಪಾರ್ಕ್ ಡಾರ್ವಿನ್ ಸಿಟಿಯ ಅಮ್ಯೂಸ್‌ಮೆಂಟ್ ಪಾರ್ಕ್‌ನ ಪ್ರಮುಖ ಆಕರ್ಷಣೆಗಳಲ್ಲೊಂದು. ಈ ಪಾರ್ಕ್‌ನಲ್ಲಿ ಸುಮಾರು 70ಕ್ಕೂ ಹೆಚ್ಚಿನ ವಿವಿಧ ತಳಿಯ ಮೊಸಳೆ ಮತ್ತು ಅಪಾಯಕಾರಿ ಜಲಚರಗಳನ್ನು ನೋಡಬಹುದು. ಆಸ್ಟ್ರೇಲಿಯಾದ ವಿವಿಧ ಪ್ರದೇಶಗಳಲ್ಲಿ ಕಾಣಸಿಗುವ ಮೊಸಳೆ ಮತ್ತಿತರ ಜಲಚರಗಳನ್ನು ಇಲ್ಲಿ ಬೃಹತ್ ಗಾಜಿನ ಅಕ್ವೇರಿಯಂಗಳಲ್ಲಿ ಸಾಕುತ್ತಿದ್ದಾರೆ.

ಈ ಮೊಸಳೆ ಪಾರ್ಕ್‌ನ ವಿಶೇಷ 'ಕೇಜ್ ಆಫ್ ಡೆತ್' ಎಂಬ ಮೊಸಳೆಯೊಂದಿಗಿನ ಸರಸದ ಈಜಾಟ. ಈ ಅನುಭವ ಪಡೆಯಲು ನಿಮ್ಮ ಗುಂಡಿಗೆ ಗಟ್ಟಿ ಇರಬೇಕು. ಸುಮಾರು 6 ಮೀಟರ್ ಉದ್ದದ ಹಾಗೂ 950 ಕೇಜಿಗಿಂತಲೂ ಅಧಿಕ ಭಾರದ ಭಾರೀ ಮೊಸಳೆ ಇರುವ ಕೊಳಕ್ಕೆ 9 ಅಡಿ ಎತ್ತರದ ಗಾಜಿನ ಕಂಟೈನರ್‌ನಲ್ಲಿ ಒಬ್ಬರು ಅಥವಾ ಇಬ್ಬರನ್ನು ನಿಲ್ಲಿಸಿ ಇಳಿಯಬಿಡುತ್ತಾರೆ. ನಿಮ್ಮ ಮತ್ತು ಮೊಸಳೆಯ ಮಧ್ಯೆ ಇರುವ ಅಂತರ ತೆಳುವಾದ ಗಾಜಿನ ಪರದೆಯಷ್ಟೇ! ಇಲ್ಲಿ ಗಾಜಿನ ಪಂಜರದ ಸುತ್ತ ಮೊಸಳೆ ಸುತ್ತು ಹಾಕುತ್ತಿರುತ್ತದೆ. ಆಗಾಗ ಮೇಲಿನಿಂದ ಎಸೆಯುವ ಮಾಂಸದ ತುಂಡಿಗಾಗಿ ಹಾರಿ ಕ್ಯಾಚ್ ಹಿಡಿಯುವಾಗ ಮೊಸಳೆಯು ನಿಮ್ಮನ್ನು ಸವರಿಕೊಂಡು ಹೋದಂತೆ ಇಲ್ಲವೇ ಬಾಯಿ ತೆರೆದು ನುಂಗಲು ಬಂದಂತೆ ಅನ್ನಿಸುತ್ತದೆ.

ಈ 15 ನಿಮಿಷದ ಅನುಭವ ಪಡೆಯಲು 120 ಆಸ್ಟ್ರೇಲಿಯನ್ ಡಾಲರ್(ಸುಮಾರು 5880 ರೂಪಾಯಿ) ಪ್ರವೇಶ ಶುಲ್ಕವಿದೆ. ಬರೇ ಮೊಸಳೆ ಪಾರ್ಕ್ ನೋಡಿದರೆ ಸಾಕು ಎನ್ನುವವರಿಗೆ 32 ಆಸ್ಟ್ರೇಲಿಯನ್ ಡಾಲರ್ (1560 ರೂಪಾಯಿ) ಶುಲ್ಕ ವಿಧಿಸುತ್ತಾರೆ. ಇಲ್ಲಿ ಮೊಸಳೆಗೆ ಆಹಾರ ನೀಡಲು, ಚಿಕ್ಕ ಮಕ್ಕಳು ಮೊಸಳೆ ಮರಿಗಳನ್ನು ಹಿಡಿದುಕೊಳ್ಳಲು ಅವಕಾಶವಿದೆ. ಗುಂಡಿಗೆ ಗಟ್ಟಿ ಇದ್ದರೆ ಒಮ್ಮೆ ಮೊಸಳೆಯೊಂದಿಗೆ ಈಜಾಡಿ ಬರಬಹುದು.

**ಕಿರಣ್ ಇಜಿಮಾನ್**